


Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD
Rotary

Rtn. Francesco Arezzo
RI President 2025-26

| Rtn. K. Palaksha<br>District Governor 2025-26 | Rtn. Anand R.<br>President, Mob: 99800 93066 | Rtn. Vishwas Y.<br>Secretary, Mob : 99800 63180 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –40 ದಿನಾಂಕ : 15–04–2026


## ನಮ್ಮ ಕ್ಲಬ್‌ನ ಚಾರ್ಟರ್ ಡೇ ಆಚರಣೆ (ಸಂಸ್ಥಾಪನಾ ದಿನಾಚರಣೆ)

ದಿನಾಂಕ: 15.04.2026 ರಂದು ರೋಟರಿ ಸಭೆ ವಿಶೇಷವಾದ ಸಭೆಯಾಗಿತ್ತು. (ಏಪ್ರಿಲ್ 14 ಸಂಸ್ಥಾಪನಾ ದಿನ) ಅಂದು ನಮ್ಮ ಕ್ಲಬ್‌ನಲ್ಲಿ ಸಂಸ್ಥಾಪಕರ ದಿನವನ್ನು ಆಚರಿಸಲಾಯಿತು. ಅಂದಿನ ಸಭೆಗೆ ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿದ್ದ ನಮ್ಮ ಕ್ಲಬ್‌ನ ಹಿರಿಯ ಸದಸ್ಯರಾದ ರೊ.ಪಿಡಿಜಿ. ಡಾ.ಆರ್.ಡಿ ಪ್ರಭುರವರು ಹಾಗೂ ರೊ. ಪಿಡಿಜಿ. ರೊ.ಡಾ. ಪಿ.ನಾರಾಯಣರವರು, ಅಧ್ಯಕ್ಷರಾದ ರೊ.ಆರ್. ಆನಂದ್ ಮತ್ತು ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿರವರು ವೇದಿಕೆಯಲ್ಲಿದ್ದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು.

ಅಂದಿನ ಕಾರ್ಯಕ್ರಮದಲ್ಲಿ ಹಲವಾರು ಮಾಜಿ ಅಧ್ಯಕ್ಷರುಗಳನ್ನು ಸನ್ಮಾನಿಸಿ ಅವರ ಸಾಧನೆಗಳ ಬಗ್ಗೆ ತಿಳಿಸಿ ಕೃತಜ್ಞತೆಯನ್ನು ವ್ಯಕ್ತಪಡಿಸಲಾಯಿತು. ಸಾರ್ಜೆಂಟ್ ರೊ.ಎಸ್. ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಕಾರ್ಯಕ್ರಮಕ್ಕೆ ಚಾಲನೆ ದೊರೆಯಿತು.














ರೊ.ಭೂಪಾಳಂ ಸುಮಲತಾರವರಿಂದ – 'ನೀಡು ಶಿವ ನೀಡದಿರು ಶಿವ ಬಾಗುವುದು ನನ್ನ ಕಾಯ' ಎಂಬ ಗೀತೆಯ ಸುಶ್ರಾವ್ಯಗಾಯನದೊಂದಿಗೆ ಪ್ರಾರ್ಥನೆಯಾಯಿತು. ಅಧ್ಯಕ್ಷರಾದ ರೊ.ಆರ್.ಆನಂದರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಹುಟ್ಟು ಹಬ್ಬದ ಶುಭಾಶಯ ಕೋರಿದರು. ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ಹಿರಿಯ ಸದಸ್ಯರಾದ ರೊ.ಬಿ.ಕೆ.ಗೋವಿಂದರಾಜ್‌ರವರನ್ನು ವೇದಿಕೆಗೆ ಆಹ್ವಾನಿಸಿ, ಅವರು ಹುಟ್ಟು ಹಬ್ಬವನ್ನು ಆಚರಿಸಿಕೊಂಡ ಹಿನ್ನೆಲೆಯಲ್ಲಿ ನೆನಪಿನ ಕಾಣಿಕೆ ನೀಡಿ ಶುಭಾಶಯ ಕೋರಲಾಯಿತು.

ರೊ.ಪಿಡಿಜಿ.ಡಾ.ಪಿ.ನಾರಾಯಣ್‌ರವರು ಕ್ಲಬ್‌ನ ಮಾಜಿ ಅಧ್ಯಕ್ಷರುಗಳಿಗೆ ಸನ್ಮಾನಕ್ಕಾಗಿ ಕರೆಯುವ ಮೊದಲು ನಮ್ಮ ಕ್ಲಬ್‌ನ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿದರು. ಮಾರ್ಚ್ 12 1958ರಂದು ಶಿವಮೊಗ್ಗಗೆ ರೋಟರಿ ಬೆಂಗಳೂರು ಇವರು ಪ್ರಾಯೋಜಿಸಿದ ರೋಟರಿ ಕ್ಲಬ್ ಪ್ರಥಮ ಬಾರಿಗೆ ಬಂದಿತು. ನಮ್ಮ ಕ್ಲಬ್‌ನ ಆರಂಭ ಹಾಗೂ ಚಟುವಟಿಕೆಗಳು ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹುದು. ಆರಂಭದ ದಿನಗಳನ್ನು ನಾವ್ಯಾರು ನೋಡಿಲ್ಲ ಕೇಳಿದ್ದು. ಏನೆಂದರೆ, ಅಂದಿನ ರಾಜಪ್ರಮುಖರಾದ ಮೈಸೂರು ಸಂಸ್ಥಾನದ ಮಹಾರಾಜ ಶ್ರೀಜಯಚಾಮರಾಜ ಒಡೆಯರ್‌ರವರೊಂದಿಗೆ ನಮ್ಮ ರೋಟರಿಯ ಪ್ರಥಮ ಅಧ್ಯಕ್ಷರಾದ ಹಾಗೂ ಅಂದಿನ ಜಿಲ್ಲಾಧಿಕಾರಿಗಳಾದ ರೊ. ಭರಣಯ್ಯನವರೊಂದಿಗೆ ರಾಮಣ್ಣ ಶ್ರೇಷ್ಠಿ ಪಾರ್ಕ್‌ನಿಂದ ಶಿವಮೊಗ್ಗೆಯ ಟೌನ್ ಹಾಲ್‌ನವರೆಗೆ ಮೆರವಣಿಗೆಯೊಂದಿಗೆ ಆಗಮಿಸಿದ್ದದು ವಿಶೇಷವಾಗಿತ್ತು. ಆಗ ವಕೀಲರಾಗಿದ್ದು (ನಂತರ ಹೈಕೋರ್ಟ್ ನ್ಯಾಯಾಧೀಶರಾಗಿ ನಿವೃತ್ತರಾದ) ರೊ.ಎನ್.ಡಿ.ವೆಂಕಟೇಶ್‌ರವರು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು. ಆ ಉದ್ಘಾಟನಾ ಕಾರ್ಯಕ್ರಮದಲ್ಲಿ ರಾಜಪ್ರಮುಖರಾದ ಮೈಸೂರು ಸಂಸ್ಥಾನದ ಮಹಾರಾಜ ಶ್ರೀಜಯಚಾಮರಾಜ ಒಡೆಯರ್‌ರವರು ರೋಟರಿ ಕ್ಲಬ್ ಶಿವಮೊಗ್ಗವನ್ನು ಉದ್ಘಾಟಿಸಿ ಈ ರೀತಿ ನುಡಿದಿದ್ದರು.

## ಈ ವಾರದ ಸಭೆ

**ದಿನಾಂಕ: 22–04–2026, ಬುಧವಾರ** **ಸಂಜೆ 6:45 ರಿಂದ**

**ಅತಿಥಿ: ಶ್ರೀ ಶ್ರೀಪತಿ ಎಲ್. ಕೆ.**

ವಿಸಿಟಿಂಗ್ ಪ್ರೊಫೆಸರ್, ಐಐಟಿ, ಧಾರವಾಡ

**ವಿಷಯ: ಬದಲಿ ಅಡುಗೆ ಇಂಧನಗಳು**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ**, ಸವಳಂಗ ರಸ್ತೆ, ಶಿವಮೊಗ್ಗ

"Through its Social Service Activities the Rotary reaches who need guidance and succor. I feel confident through your endeavor you will make Shimoga a happier and healthier place for its Citizens". ಎಂತೆಂತಹ ಪ್ರತಿಷ್ಟಿತ ವ್ಯಕ್ತಿಗಳು ನಮ್ಮ ಕ್ಲಬ್‌ನ ಅಧ್ಯಕ್ಷತೆಯನ್ನು ವಹಿಸಿದ್ದರು ಎಂದರೆ, ಅಂದಿನ ವಿದ್ಯಾಮಂತ್ರಿಗಳಾಗಿದ್ದ ರೊ. ಎ.ಆರ್. ಬದರಿ ನಾರಾಯಣ ಅಯ್ಯಂಗಾರ್, ರೊ.ಡಾ.ಕೆ.ಎನ್. ದತ್ತಾತ್ರಿ, ಖ್ಯಾತ ವಕೀಲರಾದ ರೊ. ವೆಂಕಟರಾಮಾ ಶಾಸ್ತ್ರಿ, ರೊ.ಕೆ.ಜಿ. ಸುಬ್ರಹ್ಮಣ್ಯ ಮುಂತಾದವರುಗಳು ನಮ್ಮ ರೋಟರಿಗೆ ನಾಯಕರಾಗಿ ಶಿವಮೊಗ್ಗ ರೋಟರಿಗೆ ಮೆರುಗು ತಂದಿದ್ದಾರೆ.

ಕ್ಲಬ್‌ನಿಂದ ಗವರ್ನರ್‌ಗಳಾಗಿ ರೊ.ಪಿಡಿಜಿ. ವೆಂಕಟರಾಮಾ ಶಾಸ್ತ್ರಿಯವರು (1965–66) ರೊ.ಪಿಡಿಜಿ. ಕೆ.ಜಿ.ಸುಬ್ರಹ್ಮಣ್ಯರವರು (1979–80), ರೊ.ಡಾ.ಪಿಡಿಜಿ.ಆರ್.ಡಿ. ಪ್ರಭುರವರು (1986–87) ರೊ.ಪಿಡಿಜಿ. ಡಾ.ಪಿ.ನಾರಾಯಣ್‌ರವರು (1996–97) ಮತ್ತು ಸಿಓಎಲ್ ಪ್ರತಿನಿಧಿಯಾಗಿ 2004 ರಲ್ಲಿ ರೋಟರಿ ಪಾರ್ಲಿಮೆಂಟ್‌ನಲ್ಲಿ ಭಾಗವಹಿಸಿದ್ದರು) ರೋಟರಿ ಅಭ್ಯುದಯದಲ್ಲಿ, ಬೆಳವಣಿಗೆಯಲ್ಲಿ ಇವರೆಲ್ಲರ ಧನಾತ್ಮಕ ಚಿಂತನೆಗಳು ನಮ್ಮ ರೋಟರಿ ಕ್ಲಬ್‌ನ್ನು ಕ್ಲಬ್ ಮಟ್ಟದಿಂದ ಜಿಲ್ಲಾಮಟ್ಟದವರೆಗೆ ಕೊಂಡೊಯ್ದು ಮಾಡಿದ ಸೇವೆಗಳನ್ನು ಗುರುತಿಸಿ ಶ್ಲಾಘಿಸಲಾಗಿದೆ ಎಂದರು.

Rtn. Dr. P.Narayanaas member of the India national Polio Plus Committee for sixteen years and the Vice Chairman for ten years led the Polio Eradication programme in the country. He has been awarded Polio Life Time Achievement Award by Rotary.

ಕ್ಲಬ್‌ನ ಮೂಲಕ 7 ಜನ ಜಿ.ಎಸ್. ಈ ತಂಡಕ್ಕೆ ನಾಯಕರಾಗಿ ವಿದೇಶಕ್ಕೆ ತೆರಳಿ ಕಾರ್ಯ ನಿರ್ವಹಿಸಿದ್ದಾರೆ. ಅವರಲ್ಲಿ ರೊ. ಡಾ. ಆರ್.ಡಿ.ಪ್ರಭು, ರೊ.ಡಾ.ಪಿ.ನಾರಾಯಣ್, ಡಾ. ಅಶೋಕ್ ಪೈ, ಎಂ.ಶಂಕರ್‌ರಾವ್ & ಶ್ರೀಮತಿ ಎಸ್. ರಾವ್, ರೊ. ಹೆಚ್. ಆರ್.ಉಮೇಶ್ ಆರಾಧ್ಯ. ನಮ್ಮ ಕ್ಲಬ್ 7 ಹೊಸ ಕ್ಲಬ್‌ಗಳನ್ನು ಹುಟ್ಟು ಹಾಕಿದೆ. ಸಹಾಯಕ ಗವರ್ನರ್ ಆಗಿ ಉಮೇಶ್ ಆರಾಧ್ಯ, ನಾಗೇಶ್ ನಾಯಕ್, ರೊ. ಎಸ್.ದತ್ತಾತ್ರಿ, ರೊ.ಉದಯಶಂಕರ ಶಾಸ್ತ್ರಿ, ರೊ. ಎನ್.ಎಸ್. ಶ್ರೀಧರ್, ರೊ.ಸುನೀತಾ ಶ್ರೀಧರ್‌ರವರುಗಳು ಕಾರ್ಯ ನಿರ್ವಹಿಸಿದ್ದಾರೆ. ನಮ್ಮ ಕ್ಲಬ್ ಜಿಲ್ಲಾ ಸಮ್ಮೇಳನಗಳು, ಜಿಲ್ಲಾ ಸೆಮಿನಾರುಗಳು, ಅಂತರ ಕ್ಲಬ್ ಸಭೆಗಳನ್ನು ರೈಲಾದಂತಹ ಸೆಮಿನಾರ್‌ಗಳನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಹಿಂದೆ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳೆಯರಿಗೆ "ಸೃಷ್ಟಿ" ಸಮ್ಮೇಳನ ಏರ್ಪಡಿಸಿದ್ದು ಯಶಸ್ವಿಯಾಗಿ ನಡೆದಿದೆ.

ನಮ್ಮ ಕ್ಲಬ್ ರೋಟರಿ ಜಿಲ್ಲೆಯಲ್ಲಿ ಅತ್ಯುತ್ತಮ ಕ್ಲಬ್ ಎಂಬುದಾಗಿ ಹಲವಾರು ಬಾರಿ ಪ್ರಶಸ್ತಿ ಗಳಿಸಿದ್ದು, ನಮ್ಮ ಕ್ಲಬ್‌ನ "ವಿಶ್ವಮಿತ್ರ" ಪತ್ರಿಕೆಯಂತೂ ಕಳೆದ 50 ವರುಷಗಳಿಂದ ಇಡೀ ರೋಟರಿ ಜಿಲ್ಲೆಯಲ್ಲೇ ಅತ್ಯುತ್ತಮ ವಾರ ಪತ್ರಿಕೆ ಎಂಬುದಾಗಿ ಹೆಸರು ಗಳಿಸಿದೆ. ನಮ್ಮ ಕ್ಲಬ್ ನಡೆಸಿದ ರಜತ ಮಹೋತ್ಸವಕ್ಕೆ ಆಗಮಿಸಿದ್ದ ರೊ.ರಾಜೇಂದ್ರ ಕೆ. ಸಾಬೂರವರು 2008ರಲ್ಲಿ ನಡೆದ ಕ್ಲಬ್‌ನ ಸುವರ್ಣ ಮಹೋತ್ಸವಕ್ಕೂ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ವಿಶೇಷವೆಂದರೆ ಆಗ ಅವರು ಅಂತರರಾಷ್ಟ್ರೀಯ ರೋಟರಿ ಅಧ್ಯಕ್ಷರಾಗಿದ್ದರು.

**Catalogue of Service Activities all these 60 years**

Community Service: Rotary Club Shimoga has indeed touched the hearts of the People of Shimoga by its phenomenal community Service Activities: (Highlighted some of them here)

- Construction two wards at Mcgann Hospital
- Mass Eye, Deafness Relief, Cleft Lip free surgical camps
- Sports meet for Physically Handicapped
- Village adoption.
- Polio Immunisaton camps
- School Health Programme
- School Support system (300 + schoolsprovided furniture,
























ನೀವು ಅತ್ಯುತ್ತಮ ರೋಟರಿ ಸದಸ್ಯರೆಂದಾದರೆ ಪ್ರತಿ ವಾರದ ಸಭೆಗೆ ತಪ್ಪದೇ ಬನ್ನಿ

















water, library, toilets, books and computer through multiple Matching and Global Grants.
- Hemodialysis machine to Hoysaladialysis Centre.
- Facilities to Sharnya Hospice Centre
- Ambulance to Rural areas
- Hearse (Mukthivahini - dead bodies carrying van)
- 42 low cost shelters - Drinking Water facilities
- Masashana
- Provided Covid related equipment worth of Rs. 5.0 crores to Mcgann Hospital
- Under Global Grant /Matching Grant programme , Memmography machine to Usha Nursing Home, Godana, Hearse, School Support system, provided equipment to Shankar Eye Hospital etc., Totally 14 crore worth community service projects completed by our club under MG/GG Grant.

**Under Youth Service Programme**
- Youth Festival
- Interact clubs in High schools
- Mock Parliament
- Mid day meals
- IAS KAS and other competitive exam training programme
- UdyogaMela, career Guidance Seminars

**Under Vocational Service**
- Awards to Vocational Experts every year.

**Under International Service**
- Record No of Matching Grant, District Grant and Global Grant Project
- Participation in Youth Exchange Programme
- Participation in G.S.E. Team projects

**Projects of Pride**
- Ashakirana residential school for mentally challenged children: Sofar, 1000 children rehabilitated. Current strength is 45-50.
- Rotary Gym
- Upgradation of Rural and semi rural Schools.
- Godana 442 cows provided to empower under privileged women in villages near by Shimoga and Rippenpet.
- Public toilets
- Upgradation of National and other high schools

ಈಗಾಗಲೇ 32 ಮ್ಯಾಚಿಂಗ್ ಗ್ರಾಂಟ್‌ಗಳು, 16 ಗ್ಲೋಬಲ್ ಗ್ರಾಂಟ್‌ಗಳು, 6 ಜಿಲ್ಲಾ ಗ್ರಾಂಟ್‌ಗಳಲ್ಲಿ ಕಾರ್ಯ ಕೈಗೊಂಡಿದೆ., 74 ಪಿಹೆಚ್‌ಎಫ್, 4 ಮೇಜರ್ ಡೋನರ್‌ಗಳು, ಆಗಿದ್ದಾರೆ. All time giving ರೂ.3,06,089.00 ಡಾಲರ್ ಆಗಿದೆ.

ಅಧ್ಯಕ್ಷರಾಗಿರುವವರಲ್ಲಿ 36 ಜನ ಸ್ವರ್ಗಸ್ಥರಾಗಿದ್ದಾರೆ. 10 ಜನ ಕ್ಲಬ್ ಬಿಟ್ಟಿದ್ದಾರೆ ಎಂದು ವಿವರಣೆಯನ್ನು ನೀಡಿದ ರೊ.ಪಿಡಿಜಿ. ಡಾ.ಪಿ.ನಾರಾಯಣರವರು, ಅಂದಿನ ಸಭೆಯಲ್ಲಿ ಭಾಗವಹಿಸಿದ್ದ ನಮ್ಮ ಕ್ಲಬ್‌ನ ಎಲ್ಲಾ ಈ ಕೆಳಕಂಡ ಮಾಜಿ ಅಧ್ಯಕ್ಷರುಗಳನ್ನು ವೇದಿಕೆಗೆ ಆಹ್ವಾನಿಸಿದರು. ಅವರುಗಳಿಗೆ ಶಾಲು ಹೊದಿಸಿ, ಮಾಲಾರ್ಪಣೆ ಮಾಡಿ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷರಾದ ರೊ.ಆರ್.ಆನಂದ್, ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿ, ರೊ.ಪಿಡಿಜಿ. ಡಾ.ಆರ್. ಡಿ. ಪ್ರಭು, ರೊ.ಪಿಡಿಜಿ. ಡಾ.ಪಿ. ನಾರಾಯಣರವರು ಮತ್ತು ರೊ.ಎಸ್. ಮಂಜುನಾಥರವರು ಪಾಲ್ಗೊಂಡಿದ್ದರು.

**ಶ್ರೀ ಡಿ.ಆರ್. ಮಂಜುನಾಥ್, ಶ್ರೀ ಅಜಿತ್‌ಕುಮಾರ್ ಇಡ್ಯ, ರೊ.ಪಿಡಿಜಿ. ಡಾ. ಆರ್.ಡಿ.ಪ್ರಭು, ರೊ.ಪಿಡಿಜಿ. ಡಾ.ಪಿ.ನಾರಾಯಣ, ರೊ. ಟಿ.ಆರ್. ಅಶ್ವಥನಾರಾಯಣ, ರೊ.ಡಿ.ಎಸ್. ನಟರಾಜ್, ರೊ.ಬಿ.ಕೆ. ಗೋವಿಂದರಾಜ್, ರೊ.ಎ.ಮಂಜುನಾಥ್, ರೊ.ಪಿಎಜಿ. ಹೆಚ್.ಡಿ. ಉದಯಶಂಕರ ಶಾಸ್ತ್ರಿ , ರೊ.ಡಾ. ಉಷಾ ಆರ್.ಪ್ರಭು, ರೊ.ಎಸ್.ಎಂ. ವೀರಭದ್ರಪ್ಪ, ರೊ.ಪಿಎಜಿ.ಎನ್.ಎಸ್.ಶ್ರೀಧರ್, ರೊ.ವೈ.ಗೋಪಾಲಕೃಷ್ಣ ಗುಪ್ತ, ರೊ. ಎಂ.ಮಾಧವಾಚಾರ್ ರೊ. ಪಿಎಜಿ. ಸುನಿತಾ ಶ್ರೀಧರ್, ರೊ.ಹೆಚ್.ಎಸ್. ಮೋಹನ್, ರೊ.ಕಿಶೋರ್ ಶೀರನಾಳಿ, ರೊ. ನಾಗಪತಿ.ವಿ.ಭಟ್, ರೊ.ಸೂರ್ಯನಾರಾಯಣ ಉಡುಪ, ರೊ. ಸೆಂಥಿಲ್‌ವೇಲನ್, ರೊ.ಆರ್.ಆನಂದ್ (ಹಾಲಿ ಅಧ್ಯಕ್ಷರು), ರೊ.ಎನ್. ಗೋಪಿನಾಥ್ ಚುನಾಯಿತ ಅಧ್ಯಕ್ಷರು ಸನ್ಮಾನಿತರಾದರು. ನಾವುಗಳು Make my club great again ಎಂಬುವಂತೆ ಕಾರ್ಯ ನಿರ್ವಹಿಸಬೇಕಾಗಿದೆ ಎಂದು ರೊ.ಪಿಡಿಜಿಡಾ. ಪಿ.ನಾರಾಯಣರವರು ನುಡಿದರು. ಅಧ್ಯಕ್ಷರ ಖುರ್ಚಿಯ ಬಗ್ಗೆ ಕೇಳಿದಾಗ ಅದಕ್ಕೆ ಸುಮಾರು 60 ವರ್ಷಗಳ ಇತಿಹಾಸವಿದೆ ಎಂದರು.**

ರೊ.ಪಿಡಿಜಿ.ಡಾ.ಆರ್.ಡಿ.ಪ್ರಭುರವರು ಮಾತನಾಡಿ, ರೋಟರಿಯಲ್ಲಿನ ತಮ್ಮ ಅನುಭವವನ್ನು ಪ್ರಸ್ತುತ ಪಡಿಸಿದರು. ಇಲ್ಲಿ ನಮಗೆ ಅವಕಾಶಗಳು ಕೇಳಿ ಬಂದಿಲ್ಲ. ತಾವಾಗಿಯೇ ಬಂದಾಗ ಅದನ್ನು ಸ್ವೀಕರಿಸಿ ಆದಷ್ಟು ಕೆಲಸ ಮಾಡಿದ್ದೇವೆ. ಇನ್ನು ಎಷ್ಟು ದಿವಸ ರೋಟರಿಗೆ ಬರುತ್ತೀವೊ ಗೊತ್ತಿಲ್ಲ ಎನ್ನುತ್ತಾ ತಮ್ಮ ಅನುಭವಗಳನ್ನು ಹಂಚಿಕೊಂಡರು. ತಾವು ವಿಶ್ವಮಿತ್ರದ

4ನೇ ಪುಟಕ್ಕೆ



## ಸಂಪಾದಕೀಯ

### ಜಿರಲೆ ಸಿದ್ಧಾಂತ...!

ಒಂದು ರೆಸ್ಟೋರೆಂಟ್‌ನಲ್ಲಿ ಜಿರಳೆಯೊಂದು ಇದ್ದಕ್ಕಿದಂತೆ ಎಲ್ಲಿಂದಲೋ ಹಾರಿ ಬಂದು ಒಬ್ಬ ಮಹಿಳೆಯ ಮೇಲೆ ಕುಳಿತಿತು. ಗಾಬರಿಗೊಂಡ ಅವಳು ಭಯದಿಂದ ಕುಣಿಯುತ್ತ, ಕಿರುಚುತ್ತ ತನ್ನ ಎರಡೂ ಕೈಗಳಿಂದ ಜಿರಳೆಯನ್ನು ತೆಗೆದುಹಾಕಲು ತೀವ್ರವಾಗಿ ಪ್ರಯತ್ನಿಸುತ್ತಿದ್ದಳು. ಅವಳ ಪ್ರತಿಕ್ರಿಯೆ ಹೇಗಿತ್ತೆಂದರೆ ಅವಳ ಸುತ್ತಮುತ್ತಲಿನ ಎಲ್ಲರೂ ಸಹ ಭಯಭೀತರಾದರು. ಕೊನೆಗೂ ಮಹಿಳೆ ಜಿರಳೆಯನ್ನು ದೂರ ತಳ್ಳುವಲ್ಲಿ ಯಶಸ್ವಿಯಾದಳು. ಆದರೆ ಅದು ಸನಿಹವಿದ್ದ ಇನ್ನೊಬ್ಬ ಮಹಿಳೆಯ ಮೇಲೆ ಬಿದ್ದಿತು. ಹೋಟೆಲ್ ಪರಿಚಾರಿಕೆ ಅವಳ ರಕ್ಷಣೆಗೆ ಮುಂದೆ ಬಂದಳು. ಜಿರಳೆಯನ್ನು ಎಸೆಯುವ ಮಹಿಳೆಯ ಅವಸರಕ್ಕೆ ಜಿರಳೆ ಮುಂದೆ ಸಹಾಯಕ್ಕೆ ಧಾವಿಸಿದ ಪರಿಚಾರಿಕೆಯ ಮೇಲೆ ಬಿದ್ದಿತು.

ಪರಿಚಾರಿಕೆ ಶಾಂತವಾಗಿ ಮತ್ತು ದೃಢವಾಗಿ ನಿಂತು ತನ್ನ ವಸ್ತ್ರದ ಮೇಲಿದ್ದ ಜಿರಳೆಯ ನಡವಳಿಕೆಯನ್ನು ಗಮನಿಸಿದಳು. ಅವಳಿಗೆ ಸಾಕಷ್ಟು ಆತ್ಮವಿಶ್ವಾಸ ಬಂದಾಗ ಅವಳು ಅದನ್ನು ತನ್ನ ಬೆರಳುಗಳಿಂದ ಹಿಡಿದು ರೆಸ್ಟೋರೆಂಟ್‌ನಿಂದ ಹೊರಗೆ ಎಸೆದಳು.

ಕಾಫಿ ಹೀರುತ್ತಾ ಇದನ್ನೆಲ್ಲ ಎದುರಿಗೆ ನೋಡುತ್ತಾ ಕೂತಿದ್ದ ಕಂಪನಿಯೊಂದರ ಆಡಳಿತಗಾರನ ಮನಸಿನಲ್ಲಿ ಆಲೋಚನೆಗಳ ತರಂಗಗಳು ಎದ್ದವು.

ಮೊದಲ ಮಹಿಳೆಯರಿಬ್ಬರ ಹಾಸ್ಯಾಸ್ಪದ ವರ್ತನೆಗೆ ಜಿರಳೆ ಕಾರಣವೇ? ಹಾಗಿದ್ದರೆ ಆ ಪರಿಚಾರಿಕೆ ಏಕೆ ಗೊಂದಲಕ್ಕೆ ಒಳಗಾಗಲಿಲ್ಲ? ಆಕೆ ಪರಿಸ್ಥಿತಿಯನ್ನು ಯಾವುದೇ ಗೊಂದಲವಿಲ್ಲದೆ ಪರಿಪೂರ್ಣವಾಗಿ ತಕ್ಷಣವೇ ಹೇಗೆ ನಿರ್ವಹಿಸಿದಳು? ಈ ಗೊಂದಲಕ್ಕೆಲ್ಲ ಜಿರಳೆ ಕಾರಣವಾಗಿರಲಿಲ್ಲ. ಆದರೆ ಜಿರಳೆಯಿಂದ ಉಂಟಾದ ತೊಂದರೆಯನ್ನು ನಿಭಾಯಿಸಲು ಆ ಮಹಿಳೆಯರ ಅಸಮರ್ಥತೆಯು ಅವರನ್ನು ತೊಂದರೆಗೆ ಒಳಪಡಿಸಿತು.

ನನ್ನ ತಂದೆ, ನನ್ನ ಬಾಸ್ ಅಥವಾ ನನ್ನ ಹೆಂಡತಿಯ ಕೂಗು ಅಥವಾ ಬೈಗುಳ ನನ್ನನ್ನು ತೊಂದರೆಗೊಳಿಸುವುದಿಲ್ಲ. ಆದರೆ ಅವರ ಕೂಗು ಅಥವಾ ಬೈಗುಳದಿಂದ ಉಂಟಾಗುವ ತೊಂದರೆಗಳ್ನು ನಿಭಾಯಿಸಲು ನನ್ನ ಅಸಮರ್ಥತೆಯು ನನ್ನನ್ನು ತೊಂದರೆಗೊಳಿಸುತ್ತದೆ ಎಂಬುದನ್ನು ಅವರು ಅರಿತುಕೊಂಡರು.

ರಸ್ತೆಯ ಟ್ರಾಫಿಕ್ ಜಾಮ್‌ಗಳು ತೊಂದರೆಗೊಳಿಸುವುದಿಲ್ಲ. ಆದರೆ ಟ್ರಾಫಿಕ್ ಜಾಮ್‌ನಿಂದ ಉಂಟಾಗುವ ತೊಂದರೆಯನ್ನು ನಿಭಾಯಿಸಲು ನನ್ನ ಅಸಮರ್ಥತೆಯು ನನ್ನನ್ನು ತೊಂದರೆಗೊಳಿಸುತ್ತದೆ.

ಈ ಕ್ಷಣಕ್ಕೆ ಬಂದೊದಗಿದ ಸಮಸ್ಯೆಗಿಂತ ಹೆಚ್ಚಾಗಿ ಸಮಸ್ಯೆಗೆ ನನ್ನ ಪ್ರತಿಕ್ರಿಯೆ ನನ್ನ ಜೀವನದಲ್ಲಿ ಅವ್ಯವಸ್ಥೆಯನ್ನು ಸೃಷ್ಟಿಸುತ್ತದೆ.

ಜೀವನದಲ್ಲಿ ಯಾವುದಕ್ಕೂ ತಕ್ಷಣ ಪ್ರತಿಕ್ರಿಯಿಸಬಾರದು ಎಂಬುದು ಅವರಿಗೆ ಅರ್ಥವಾಯಿತು. ಯಾವಾಗಲೂ ಯೋಚಿಸಿ ಪ್ರತಿಕ್ರಿಯಿಸಬೇಕು ಎಂಬುದನ್ನು ಅವರು ಅರಿತುಕೊಂಡರು.

ಹಠಾತ್ ಪ್ರತಿಕ್ರಿಯಿಸುವ ಪ್ರವೃತ್ತಿಗೂ, ಯೋಚಿಸಿ ಮಾಡುವ ಪ್ರತಿಕ್ರಿಯೆಗೂ ಇರುವ ವ್ಯತ್ಯಾಸ ಅರ್ಥಮಾಡಿಕೊಳ್ಳಲು ಇದು ಒಂದು ಸುಂದರವಾದ ಕಥಾನಕವಾಗಿತ್ತು.

ಸಂತೋಷವಾಗಿರುವ ವ್ಯಕ್ತಿಯು ತನ್ನ ಜೀವನದಲ್ಲಿ ಎಲ್ಲವೂ ಸರಿಯಾಗಿರುವುದರಿಂದ ಹಾಗೆ ಇರುವುದಿಲ್ಲ. ಅವನು ಸಂತೋಷವಾಗಿರುತ್ತಾನೆ ! ಏಕೆಂದರೆ ಅವನ ಜೀವನದಲ್ಲಿ ಎಲ್ಲದರ ಬಗ್ಗೆ ಅವನ ವರ್ತನೆ ಆ ಸಂದರ್ಭದಲ್ಲಿ ಸರಿಯಾಗಿರುತ್ತದೆ.!!

• ರೊ. ಎಂ. ಮಾಧವಾಚಾರ್

### ವಾರದ ಸಭೆ ವರದಿ 3ನೇ ಪುಟದಿಂದ...

ಸಂಪಾದಕರಾದ ರೋಟರಿ ವರ್ಷದ ಎರಡು ಬುಲೆಟಿನ್ ಪುಸ್ತಕಗಳನ್ನು ಮತ್ತು ತಾವು ಗವರ್ನರ್ ಆಗಿದ್ದಾಗಿನ ರೋಟರಿ ಡೈರೆಕ್ಟರಿಯನ್ನು ಸಭೆಯಲ್ಲಿ ಪ್ರದರ್ಶಿಸಿದರು. ಇಂಗ್ಲೇಂಡ್‌ನ ಹೀನಾರ್ ಕ್ಲಬ್‌ನಿಂದ ನಮ್ಮ ಕ್ಲಬ್‌ನ ಹರ್ಸ್ ಪ್ರಾಜೆಕ್ಟ್‌ಗೆ (ಶವ ಸಾಗಣೆ ವಾಹನಕ್ಕೆ) ಸಹಾಯ ಮಾಡಿದ ರೊ,. ಸರ್ ದೇಸಾಯಿಯವರನ್ನು ನೆನೆದರು. ತಮಗೆ ಈವರೆಗೆ ಸಹಕಾರ ನೀಡಿದ ಎಲ್ಲರಿಗೂ ವಂದಿಸಿದರು.




ಅಧ್ಯಕ್ಷರಾದ ರೊ.ಆರ್.ಆನಂದರವರು ಮಾತನಾಡಿ, ಈ ಎಲ್ಲಾ ಮಹನೀಯರುಗಳು ಕ್ಲಬ್‌ನ ಚಟುವಟಿಕೆಗಳನ್ನು ಎಂಜಾಯ್ ಮಾಡಿ ಕಾರ್ಯ ನಿರ್ವಹಿಸಿದ್ದಾರೆ. ಇವರುಗಳ ಸೇವಾ ಮನೋಭಾವನೆಗಳನ್ನು ಕಂಡರೆ ರೋಮಾಂಚನವಾಗುತ್ತದೆ. ಮುಂದಿನ ದಿನಗಳಲ್ಲಿ ರೋಟರಿ ಸೇವಾ ಕಾರ್ಯಗಳಲ್ಲಿ ನಮ್ಮನ್ನು ನಾವು ಅವರುಗಳಂತೆ ತೊಡಗಿಸಿಕೊಳ್ಳೋಣ ಎಂದು ಆಶಿಸಿ, ತಮ್ಮ ಅಧ್ಯಕ್ಷೀಯ ನುಡಿಗಳಿಗೆ ವಿರಾಮ ನೀಡಿದರು. ಕಾರ್ಯದರ್ಶಿ ರೊ. ವಿಶ್ವಾಸ್ ಎಲಬುರ್ಗಿಯವರು ಸರ್ವರನ್ನು ವಂದಿಸಿದರು.



## ಜನ್ಮ ದಿನದ ಶುಭಾಶಯಗಳು


*Mohan D. P.*
*18th April*





### ಮುದ್ದುರಾಮನ ಚೌಪದಿ...

ಒಂದರೊಂದರ ಬಳಿಕ ಕಟ್ಟುತಿರೆ ಮಾಳಿಗೆಯ
ಅಲ್ಲಿ ಹಾಸಿಗೆ ಹಾಸಿ ನಿದ್ರಿಸುವೆ ಹೇಗೆ ?
ಗುರಿಯಿರದ ಪಯಣಿಗನಿಗೆಲ್ಲಿದೆಯೋ ನೆರಳ ಸುಖ?
ಗುರಿ ಮೊದಲು, ನಡೆ ಬಳಿಕ – ಮುದ್ದುರಾಮ




To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495